೧. ಜಾರತ್ವವನು ಮಾಡಿದ ಪಾಪಗಳಿಗೆಲ್ಲಾ
ಗೋಪೀಜನ ಜಾರನೆಂದರೆ ಸಾಲದೆ?
ಚೋರತ್ವವನು ಮಾಡಿದ ಪಾಪಗಳಿಗೆಲ್ಲ
ನವನೀತ ಚೋರನೆಂದರೆ ಸಾಲದೆ?
ಕ್ರೂರತ್ವವನು ಮಾಡಿದ ಪಾಪಗಳಿಗೆಲ್ಲ
ಮಾವನ ಕೊಂದವನೆಂದರೆ ಸಾಲದೆ?
ಪ್ರತಿದಿವಸ ಮಾಡಿದ ಪಾಪಂಗಳಿಗೆ ಎಲ್ಲಾ
ಪತಿತಪಾವನನೆಂದು ಕರೆದರೆ ಸಾಲದೆ?
ಇಂತಿಪ್ಪ ಮಹಿಮೆಯೊಳೊಗೊಂದನ್ನಾದರೂ ಒಮ್ಮೆ
ಸಂತಸದಿ ನೆನೆಯೆ ಸಲುವ ಸಿರಿಕೃಷ್ಣ ।

೨. ಅತಿಥಿ ಬಂದು ಅನ್ನವ ಬೇಡಿದರೆ ಬೇಗ
ಗತಿ ನಮಗಿಲ್ಲ ಕೊಡದು ಕೊಡದೆಂಬರು
ಸತಿಸುತರಿಗೆ ನಿರ್ಮಿಸುವರು ಮೃಷ್ಟಾನ್ನವ
ಸತತ ಬಂದ ಪೃಷ್ಟ ಸಂಬಂಧಿಗಳಿಗೆ
ಅತಿಶಯದಿ ಕುಳ್ಳಿರಿಸಿ ಪೂಜೆ ಮಾಡುವರು
ಮಾತಾಪಿತೃ ಬಳಗರ ಮನೆಹೋಗಲೀಯರು
ಮತಿಹೀನರು ಕೆಲಬರು ಶ್ರೀರಾಮಕೃಷ್ಣ
ಸತಿಸುತರಿಗೆ ನಿರ್ಮಿಸುವರು ಮೃಷ್ಟಾನ್ನವ

೩. ಆವ ಜನುಮದ ತಾಯಿ ಆವ ಜನುಮದ ತಂದೆ
ಆವ ಜನುಮದ ಸತಿ ಆವಜನುಮದ ಸುತರು
ಆವ ಜನುಮದ ಬಂಧು ಆವ ಜನುಮದ ಬಳಗ
ಆವ ಜನುಮದ ಪಿಂಡ ಆವಂಗೆ ಜನಿಸುವೆವೊ
ನೀ ವೊಲಿದು ಪಾಲಿಸೈ ಸಿರಿಕೃಷ್ಣರಾಯ

೪. ಎಲ್ಲ ಒಂದೆಂಬರ ಎರಡು ದಾಡೆಯಲಿರ್ದ
ಹಲ್ಲುದರ ಬಡಿಯಬೇಕು ಹರಿ ಭಕ್ತರಾದವರು
ಸಲ್ಲದು ಸಲ್ಲದು ಎಂಬುವುದು ಸಂಶಯಬೇಡ
ಕ್ಷುಲ್ಲಕ ಸ್ವಾಮಿದ್ರೋಹಿಯ ಕ್ಷುರದಿ ಖಂಡಿಸಬೇಕು
ಕಲ್ಲು ನಾರಿಯ ಮಾಡಿದ ಶ್ರೀರಾಮಕೃಷ್ಣನ
ಪಲ್ಲವಾಂಘ್ರಿಯ ನೆನೆದು ಪರಗತಿಯ ಪಡೆಯಿರೊ ॥

೫. ಘಟ್ಟಿಗನಾದರೇನು ಕಟ್ಟಿಸ್ತರೇನು ಗೇಣು
ಹೊಟ್ಟೆಯ ಹೊರೆವುದಕೆ ಪೂರ್ವಜನ್ಮದಲ್ಲಿ
ಕೊಟ್ಟರೆ ಉಣಲುಂಟು ಕೊಡದಿದ್ದರೇನುಂಟು
ಪಟ್ಟಾಧಿಪತಿ ಸೇವೆ ಮಾಡಿದರೆ ಪೂರ್ವದಿ
ಹುಟ್ಟಿದವಿತ್ತದೊಳು ಶಕ್ತ್ಯನುಸಾರ ಮನ
ಮುಟ್ಟಿ ಶ್ರೀರಾಮಕೃಷ್ಣನ ಪ್ರೀತ್ಯನುಸಾರವಾಗಿ
ಕೊಟ್ಟಿದ್ದರುಣಲುಂಟು ಕೊಡದಿದ್ದರೇನುಂಟು

೬. ದಾರಿದ್ರ್ಯವೆಂಬ ರಕ್ಕಸಿ ಹಿಡಿದೆನ್ನ
ಹೀರಿ ಹಿಪ್ಪೆ ಮಾಡುತಾಳೆ ತಾಳಲಾರೆ ಸಂ
ಸಾರವೆಂಬ ಮಾರಿಯಿಂದ ಬಲು ನೊಂದೆನೊ
ಆರುಮಂದಿ ವೈರಿಗಳೆನ್ನ ಸುತ್ತಮುತ್ತ
ಹೋರಿ ತಮ್ಮ ವಿಷಯಂಗಳಿಗೆನ್ನ ಸೆಳೆಯುತ್ತಾರೆ
ನಾರಾಯಣ ನಿನ್ನ ನಾಮಸ್ಮರಣೆಯಿತ್ತು
ಶ್ರೀರಾಮಕೃಷ್ಣ ಎನ್ನ ನೀ ಸಲಹಯ್ಯ

೭. ಧರ್ಮಪಥವ ಮೆಟ್ಟಿಲು ಮನವೆರಗದು,
ದುಷ್ಕರ್ಮಕಾದರೆ ಚಿಗಿ ಚಿಗಿದಾಡುವುದು
ಯುಗಧರ್ಮವೀ ಜೀವನ ಕರ್ಮವೋ ಹರಿ ಹರಿ
ನಿರ್ಮಲಾತ್ಮಕನ ನೆನೆಯಲೀಯದು,
ಯುಗಧರ್ಮವೊ ಜೀವನ ಕರ್ಮವೊ ಹರಿ ಹರಿ
ದುರ್ಮದೋಕ್ತಿಯಿಂದ ಚರಿಸುವ ನರಕ ಮೈ
ಚರ್ಮ ಸುಲಿಸದೆ ಬಿಡನು ಶ್ರೀರಾಮಕೃಷ್ಣ,
ಯುಗ ಧರ್ಮವೊ ಜೀವನ ಕರ್ಮವೊ ಹರಿಹರಿ

೮. ನಿನ್ನ ಎಂಜಲನುಂಡು ನಿನ್ನ ಬೆಳ್ಳುಡೆಯುಟ್ಟು
ಮುನ್ನ ಮಾಡಿದ ಕರ್ಮ ಬೆನ್ನಬಿಡದಿದ್ದರೆ
ನಿನ್ನ ಓಲೈಸಲೇಕೊ ಕೃಷ್ಣ
ಸಂಚಿತವನುಂಡು ಪ್ರಪಂಚದೊಳಗೆ ಬಿದ್ದು
ನಿನ್ನ ಓಲೈಸಲೇಕೋ ಕೃಷ್ಣ
ದಿನಕರನುದಿಸಿ ಕತ್ತಲೆ ಪೋಗದಿದ್ದರೆ
ಹಗಲೇನೋ ಇರುಳೇನೊ ಕುರುಡಂಗ ಸಿರಿಕೃಷ್ಣ

೯. ನೀರಮೇಲಣ ಗುಳ್ಳೆಯಂತೆ ಈ ದೇಹವಸ್ಥಿರ
ಬಾರದು ತಿಳಿಯೆ ನಿಮಿಷವೊ ನಿಮಿಷಾರ್ಧವೊ
ಹಾರಲೇತಕೆ ಪರಸತಿ ಪರಧನಕ್ಕಾಗಿ
ಹಾರಲೇತಕೆ ಗೇಣು ಹೊಟ್ಟೆಯ ಹೊರೆವುದಕ್ಕೆ
ಆರಿಗಾರೊ ಯಮದೂತರು ಎಳೆವಾಗ
ಆರು ಬಿಡಿಸುವರೊ ಶ್ರೀರಾಮಕೃಷ್ಣನಲ್ಲದೆ
ಹಾರಲೇತಕೆ ಪರಧನ ಪರಸತಿಗಾಗಿ

೧೦. ನೀರಿಲ್ಲದ ಭಾವಿ ಊರಿಲ್ಲದ ಮಠವು
ನೆರಳಿಲ್ಲದ ಮರ ಫಲವಿಲ್ಲದ ಲತೆ
ಧನವಿಲ್ಲದ ದಾತ ದಯವಿಲ್ಲದ ನಾಥ
ಮನಸಿಲ್ಲದ ಶಕುತಿ ಭಯವಿಲ್ಲದ ಭಕುತಿ
ನರಹರಿ ಮುಕುಂದ ಶ್ರೀಕೃಷ್ಣ ಎನ್ನದ
ನರರಿದ್ದು ಫಲವೇನು ಇಲ್ಲದಿದ್ದರೆ ಏನು

೧೧. ಬಲ್ಲವನುಳ್ಳವ ನೀನಿರುತಿರಲಿಕ್ಕೆ
ಕ್ಷುಲ್ಲಕರ ಮತವಿಡಿದು ಸುಖವ ಬಯಸುವುದುಂಟೆ?
ಹಲ್ಲು ಹೋಹದಲ್ಲದೆ ಅಕಟಕಟ ಮಂದಮತಿ
ಕಲ್ಲು ಗೋವಿನ ಹಾಲು ಕರುಬಯಸೆ ಬರಿದಂತೆ
ಹುಲ್ಲು ಗಂಜಿಯ ನೆರೆದು ಸಲಹುವ ಶ್ರೀರಾಮಕೃಷ್ಣನ
ಪಲ್ಲವಾಂಘ್ರಿಯ ನೆನೆದು ಪರಗತಿ ಪಡೆಯಿರೋ ।

೧೨. ಸಿರಿರಮಣ ಎಂದರೆ ಭಾಗ್ಯಕ್ಕೆ ಕಾರಣ ನರಹರಿ ಎಂದರೆ ದುರಿತ ನಿವಾರಣ
ನಾರಾಯಣ ಎಂದರೆ ಮುಕ್ತಿಗೆ ಕಾರಣ ಮರಣ ಕಾಲಗಳಲ್ಲಿ ಮರೆಯದೆ ಮನಮುಟ್ಟಿ
ನಾರಾಯಣ ಎಂದರೆ ಮುಕ್ತಿಗೆ ಕಾರಣ ಶ್ರೀರಾಮಕೃಷ್ಣಯೆಂಬ ದಿವ್ಯಮಂತ್ರಗಳಿಂದ
ದುರಿತ ಭೂತಗಳಟ್ಟು, ದುರಹಂಕಾರ ಬಿಟ್ಟು ನಾರಾಯಣ ಎಂದರೆ ಮುಕ್ತಿಗೆ ಕಾರಣ

೧೩. ಯಾವಜ್ಜೀವನ ಪ್ರಣವ ವಿಚಾರಣ ಭಾವದೊಳಗಿಹದೊಂದು ಪಥ
ಯಜುರ್ವೇದ ಋಗ್ವೇದದಿ ದೇವತಾರ್ಚನೆ ಆಹೋದೊಂದು ಪಥ
ಶ್ರೀಮದ್ವಾರಣಾಸಿಯಲಿ ಈ ಶರೀರವ ತೋಯಿಸಿಬಿಡುವದೊಂದು ಪಥ
ರಾಜ್ಯದೊಳಗೆ ಶ್ರೀವಿಷ್ಣು ದಿವ್ಯನಾಮವ ಕೀರ್ತಿಸುತಿಪ್ಪದೊಂದು ಪಥ
ಯಾವನಾದರೊಮ್ಮೆ ನೆನೆದರೆ ಶ್ರೀಕೃಷ್ಣನ ದಿವ್ಯ ಮಂಗಳನಾಮ ಎಲ್ಲೂ ಸುಪಥ

೧೪.

ಕಂಗಳು ಚೆಲುವನು ನೋಡಿ ಕರ್ಣಂಗಳು ವಾರುತಿಯ ಕೇಳಿ
ಹಿಂಗದೆ ನಾಮವ ವದನದಿ ಸವಿಯುತ್ತ ಪದಂಗಳ ಮನದಿ ನೆನೆನೆನೆದು
ರೋಮಂಗಳು ಪುಳಕಿತವಾಗಿ ಲೋಕಂಗಳ ಕಡಲೊಳು ಮುಳುಗಿ ಮೈಯುಬ್ಬಿ ಕೊಬ್ಬುತ್ತ
ಅಂಗವ ಮರೆದಾನಂದದಿ ರಂಗಾ ಎನುತಿದ್ದರೆ ಸಾಲದೆ
ಮಂಗಳ ಜಯವನ್ನು ಕರುಣಿಸೋ ಮತ್ತೊಂದು ಸಂಗವನೊಲ್ಲೆನೋ ಸಿರಿಕೃಷ್ಣರಾಯ।